18

# ಮುಕ್ತಾಯದ ಸೇವೆ ಪಲೆಸ್ತೀನದ ಎಲ್ಲಾ ಭಾಗಗಳಲ್ಲಿ

## ಪರ್ಣಶಾಲೆಗಳ ಹಬ್ಬದಿಂದ ಬೇಥಾನ್ಯಕ್ಕೆ ತಲುಪುವವರೆಗೆ

ಯೇಸುವಿನ ಸೇವೆಯ ಅವಧಿಯು, ಅಕ್ಟೋಬರಿನಿಂದ ಎಪ್ರೀಲಿನ ವರೆಗೆ, ಪಸ್ಕ ಹಬ್ಬದ ಮೊದಲಿನ ಆರು ದಿನಗಳನ್ನು ಬಿಟ್ಟು ಇತ್ತು, ಹಿಂದಿನ ಆರು ತಿಂಗಳುಗಳಲ್ಲಿ ಆತನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡುವವನಾಗಿದ್ದನು. ಯಶಸ್ವಿಯಾಗಿ ಆತನು ಯೆರೂಸಲೇಮಿನಲ್ಲಿ; ಯೂದಯ ಪ್ರದೇಶದಲ್ಲಿ; ಪುನಃ ಯೆರೂಸಲೇಮಿನಲ್ಲಿ; ಪೆರೆಯದಲ್ಲಿ; ಯೆರೂಸಲೇಮಿನ ಸಮೀಪ ಬೇಥಾನ್ಯದಲ್ಲಿ; ಪೆರೆಯದಲ್ಲಿ; ಹಿಂದಿರುಗಿ ಬೇಥಾನ್ಯದಲ್ಲಿ; ಮತ್ತೊಮ್ಮೆ ಪೆರೆಯದಲ್ಲಿ, ಸಮಾರ್ಯ ಮತ್ತು ಗಲಿಲಾಯದ ಮುಖಾಂತರ ಪ್ರಯಾಣಮಾಡಿ, ಮತ್ತು ಯೆರೂಸಲೇಮಿನ ನೆರೆಹೊರೆಯಲ್ಲಿ ಅಂತಿಮ ಹಿಂದಿರುಗುವಿಕೆಯನ್ನು ನೋಡುತ್ತೇವೆ.

**1. ಯೆರೂಸಲೇಮಿನಲ್ಲಿ; ಪರ್ಣಶಾಲೆಗಳ ಹಬ್ಬ** (ಯೋಹಾನ 7:10; 10:20).-ಇಲ್ಲಿ ಎಂದಿನಂತೆ ಯೆರೂಸಲೇಮಿನ ಸಂದರ್ಶನಗಳಿಗಾಗಿ ನಮ್ಮ ಅಧಿಕೃತತೆಯು ಯೋಹಾನನು. ಆತನು ಗಲಿಲಾಯವನ್ನು ಬಿಡುವ ಮೊದಲು, ಯೇಸುವಿನ ಬಂಧುಗಳು ತಮ್ಮೊಂದಿಗೆ ಆ *ಜಾತ್ರೆಗೆ ಬರಬೇಕೆಂದೂ* ಮತ್ತು ಅಲ್ಲಿ ದೇಶದ ರಾಜಧಾನಿಯಲ್ಲಿ ತನ್ನ ಮೆಸ್ಸೀಯತ್ವವನ್ನು ಘೋಷಿಸಬೇಕೆಂದೂ ಒತ್ತಾಯಿಸಿದ್ದರು. ಆದರೆ ಯೇಸುವಿಗೆ ಆತನದೇ ಆದ ಯೋಜನೆಗಳಿದ್ದವು, ಅವರ ಸ್ನೇಹಿತರುಗಳ ಪ್ರಾಪಂಚಿಕ ನಿರೀಕ್ಷೆಗಳಿಗೆ ಒಪ್ಪಿಕೊಳ್ಳುವುದರಿಂದ ಅವರನ್ನು ಗಂಡಾಂತರಕ್ಕೆ ಗುರಿಪಡಿಸಲಿಲ್ಲ, ಇಲ್ಲವೇ ತನ್ನ ವೈರಿಗಳೊಂದಿಗೆ ಕಾಲಕ್ಕೆ ಮುಂಚೆ ವಿರೋಧವನ್ನು ಹುಟ್ಟುಹಾಕಲಿಲ್ಲ. ಪಸ್ಕ ಹಬ್ಬಕ್ಕೆ ಇನ್ನೂ ಆರು ತಿಂಗಳವಿತ್ತು; ಆಗ ಆತನು ತಾನೇ ಸ್ವತ ತನ್ನನ್ನ ಜಗತ್ತಿನ ನಿಜವಾದ ಪಸ್ಕದಂತೆ ಅರ್ಪಿಸುವನು. ಆದುದರಂದ ಆತನು ಹಿಂಬಾಲಿಸುವನೋ ಇಲ್ಲವೋ ಎಂಬುದನ್ನು ತಿಳಿಯದೆ ಹಬ್ಬಕ್ಕೆ ಹೋದರು. ಯೆರೂಸಲೇಮಿನಲ್ಲಿ ಒಂದು ಪ್ರಶ್ನೆಯು ಬಾಯಿಂದ ಬಾಯಿಗೆ ನುಡಿಯಲ್ಪಡುತ್ತಿತ್ತು; "*ಆತನು ಎಲ್ಲಿ* ಇದ್ದಾನೆ?" ಅಂತಿಮವಾಗಿ ಹಬ್ಬದ ಮಧ್ಯದಲ್ಲಿ, ಯೇಸುವು ವೈಯಕ್ತಿಕವಾಗಿ ಯೆರೂಸಲೇಮಿಗೆ ಬಂದನು ಮತ್ತು ನೇರವಾಗಿ ದೇವಾಲಯಕ್ಕೆ ಹೋಗಿ, ಬೋಧಿಸಲು ಪ್ರಾರಂಭಿಸಿದನು. ರಬ್ಬಿಗಳ ಶಾಲೆಗಳ ಭಾಷೆಯನ್ನು ಆತನು ಮಾತನಾಡಲಿಲ್ಲವೆಂದು ರಬ್ಬಿಗಳು ಆತನ ಬಗ್ಗೆ ಅಪಪ್ರಚಾರ ಮಾಡಿದರು, ಆತನು ಭಯಪಡದೇ ಮುಂದರಿಸಿದನು. ಒಂದು ಘಟನೆಯು ಹೇಳ ಲ್ಪಟ್ಟಿದೆ - ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ಸ್ತ್ರೀಯದು.[1] ಒಂದು ಅದ್ಭುತ ಕಾರ್ಯವು ಸಂಭವಿಸಿತು - ಹುಟ್ಟು ಕುರುಡನನ್ನು ವಾಸಿಮಾಡಿದ್ದು. ಅದು ಸಬ್ಬತ್ತ ದಿನದಂದು ಮಾಡಲ್ಪಟ್ಟಿದ್ದರಿಂದ ಮಹಾ ಅಪರಾಧವಾಯಿತು, ಆತನಿಗೆ ಕಲ್ಲೆಸೆಯುವಷ್ಟರ ಮಟ್ಟಿಗೆ ಯೆಹೂದ್ಯರು ಮುಂದುವರಿದರು. ಒಳ್ಳೇ ಕುರುಬನ ಸುಂದರವಾದ ರೂಪದಲ್ಲಿ ಯೇಸುವು ತನ್ನ

ಕುರಿಗಳಿಗಾಗಿ ತಾನೇ ಸಾಯುವೆನೆಂದು ಮತ್ತು ಪುನಃ ಎದ್ದು ಬರುವೆನೆಂದು ತಿಳಿಸಿದನು.

**2. ಯೂದಾಯದ ಜಿಲ್ಲೆಗಳ ಭಾಗದಲ್ಲಿ.**-ಯೆರೂಸಲೇಮಿನ ಯೆಹೂದ್ಯರ ಸಂಚುಗಳ ಮೊದಲು ಯೇಸುವು ಪ್ರತ್ಯೇಕವಾಗಿ ಹೋಗಿ, ಕೆಲವು ವಾರಗಳನ್ನು ಪಟ್ಟಣದ ಸಮೀಪ ದಲ್ಲಿ ಕಳೆಯುತ್ತಾನೆ. ಒಂದೇ ಒಂದು ಅದ್ಭುತಕಾರ್ಯವು ದಾಖಲೆಯಾಗಿದೆ-ಸಬ್ಬತ್ ದಿನದಲ್ಲಿ ಇನ್ನೊಂದು ಗುಣಪಡಿಸುವಿಕೆ; ಆದರೆ ಆತನು ನಿರ್ದೇಶನದ ಅದ್ಭುತಕರವಾದ ಐಶ್ವರ್ಯವನ್ನು ಸುರಿಸುತ್ತಾನೆ. ಅದರ ಭಾಗಗಳು, ಮಾದಿರಿಯ ಪ್ರಾರ್ಥನೆ ಮತ್ತು ಸಾಸಿವೆ ಕಾಳಿನ, ಹುಳಿಹಿಟ್ಟಿನ ಸಾಮ್ಯಗಳು ಮೊದಲಿನ ಗಲಿಲಾಯದ ಪಾಠಗಳ ಪುನರಾವರ್ತನೆಯಂತೆ ತೋರುತ್ತವೆ. ಎರಡು ಸುಂದರವಾದ ಸಾಮ್ಯಗಳು-ಬುದ್ಧಿಹೀನ ಐಶ್ವರ್ಯವಂತ ಮತ್ತು ಒಳ್ಳೆಯ ಸಮಾರ್ಯದವನು-ಹೊಸದಾದವುಗಳಾಗಿವೆ. ಮತ್ತು ಲೂಕನಿಗೆ ವಿಶಿಷ್ಟವಾದವುಗಳಾಗಿವೆ. ಈ ಎರಡು ತಿಂಗಳುಗಳ ಚರಿತ್ರೆಗಾಗಿ ನಾವು ಅವನಿಗೆ ಉಪಕೃತರಾಗಿದ್ದೇವೆ.

ಆದರೆ ಯೇಸುವು ತಾನು ವೈಯಕ್ತಿಕವಾಗಿ ಮಾಡಬಹುದಾದಂಥ ಸುವಾರ್ತಾ ಸೇವೆಯೊಂದಿಗೆ ತೃಪ್ತನಾಗಲಿಲ್ಲ. ಸಮಯವು ಸ್ವಲ್ಪವಾಗಿತ್ತು, ಮಾಡಲು ಇನ್ನೂ ಬಹಳಷ್ಟು ಇತ್ತು, ಗಲಿಲಾಯದಲ್ಲಿ ಹನ್ನೆರಡು ಜನರನ್ನು ಕಳುಹಿಸಿದಂತೆ, ಈಗ ಯೂದಯದಲ್ಲಿ ಆತನು ಎಪ್ಪತ್ತು ಜನರನ್ನು ಕಳುಹಿಸಿದನು. ಹಳೇ ಸಂದೇಶದೊಂದಿಗೆ ಅವರು ಕಳುಹಿಸಲ್ಪಟ್ಟರು. “ಪರಲೋಕ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಳ್ಳಿರಿ.”[2]

ಈ ಅವಧಿಯಲ್ಲಿ ಬೇಥಾನ್ಯದ ಸಹೋದರಿಯರ ಪ್ರಥಮ ನೋಟವನ್ನು ಪಡೆದುಕೊಳ್ಳುತ್ತೇವೆ (ಲೂಕ 10:38-42): ಮರಿಯಳು ಒಡೆಯನ ಪಾದಗಳ ಬಳಿಯಲ್ಲಿ, ಮಾರ್ಥಳು “ಬಹಳ ಕೆಲಸಗಳ ಗಡಿಬಿಡಿಯಲ್ಲಿ.”[3]

**3. ಯೆರೂಸಲೇಮಿನಲ್ಲಿ; ಪ್ರತಿಷ್ಠೆಯ ಹಬ್ಬ** (ಯೋಹಾನ 10:22-42).- ನಮ್ಮ ಡಿಸಂಬರದಲ್ಲಿ, ಪರ್ಣಶಾಲೆಗಳ ಹಬ್ಬವಾದ ನಂತರ ಎರಡು ತಿಂಗಳಾದ ಮೇಲೆ, ಯೇಸುವು ಪ್ರತಿಷ್ಠೆಯ ಹಬ್ಬಕ್ಕೆ ಯೆರೂಸಲೇಮಿಗೆ ಹಿಂದಿರುಗಿ ಬಂದನು. ಯೆಹೂದ್ಯರು ಆತನನ್ನು ಸೊಲೊಮೋನನ ಮಂಟಪದಲ್ಲಿ ಎದುರಿಸಿದರು, ಆತನು ಮೆಸ್ಸೀಯನಾಗಿರುವನೋ ಇಲ್ಲವೋ ಎಂಬುದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ಕೇಳಿಕೊಂಡರು. ತನ್ನ ಸ್ವಂತ ಜೀವಿತ ಮತ್ತು ಸೇವೆಗೆ ಸ್ವತ ಕುರುಡರಾಗಿದ್ದ ಜನರೊಂದಗೆ ತನ್ನ ಒಪ್ಪಿಗೆಗೆ ಎಳ್ಳಷ್ಟೂ ಬೆಲೆಯಿರುವುದಿಲ್ಲವೆಂದು ತಿಳಿದು ಯೇಸುವು ನೇರವಾದ ಉತ್ತರವನ್ನು ಕೊಡುವದನ್ನು ನಿರಾಕರಿಸಿದನು. ಪುನಃ ಮತ್ತೊಮ್ಮೆ ಆತನನ್ನು ಕೊಲ್ಲಲು ಕಲ್ಲುಗ ಳನ್ನು ತೆಗೆದುಕೊಂಡರು. ಪುನಃ ಮತ್ತೊಮ್ಮೆ ಕಪೆರ್ನೌಮ ಹಾಗೂ ಗಲಿಲಾಯಗ ಳಂತೆ, ಯೆರೂಸಲೇಮ ಹಾಗೂ ಯೂದಾಯಗಳು ಆತನಿಗೆ ಮುಚ್ಚಲ್ಪಟ್ಟವು. ಒಂದು ಪ್ರಾಂತ್ಯವು ಆತನಿಗೆ ತೆರೆದಿತ್ತು. ಅದು ಯೊರ್ದನಿನ ಆಚೆಯ ಅರ್ಧ ಅನ್ಯಜನರ ಪ್ರಾಂತ ಪೆರೆಯವು; ಆ ಕಡೆಗೆ ಯೇಸುವು ತನ್ನ ಮುಖವನ್ನು ತಿರುಗಿಸಿದನು.

**4. ಬೇಥನಿಯಲ್ಲಿ; ಲಾಜರನನ್ನು ಎಬ್ಬಿಸಿದ್ದು** (ಯೋಹಾನ 11:1-54).-ಪೆರೆಯದಲ್ಲಿಯ ಯೇಸುವಿನ ಸೇವೆಗೆ ಲಾಜರನ ಮರಣವು ಅಡ್ಡಬಂದಿತು. ಬೇಥಾನ್ಯದಲ್ಲಿಯ ಚಿಕ್ಕ ಗುಂಪಿನ ಬಗ್ಗೆ ನಾವು ಸಂತೋಷದಿಂದ ತಿಳಿದಿರುವೆವು. ಯೇಸುವಿನ ಮಹಾ ಹೃದಯವು ಲೋಕದಲ್ಲಿ ತೆಗೆದುಕೊಳ್ಳಲ್ಪಟ್ಟಿತು; ಪ್ರತ್ಯೇಕವಾದ ಮೃದುಭಾವದಿಂದ ಆತನಿಗೆ “ಮಾರ್ಥ, ಆಕೆಯ ಸಹೋದರಿ ಮತ್ತು ಲಾಜರನಲ್ಲಿ” ಪ್ರೀತಿಯಿತ್ತು.[4] ಆ ಮನೆಗೆ ಆತನು ದಾಖಲೆಯಾಗದ ಅನೇಕ ಸಂದರ್ಶನಗಳನ್ನು ಮಾಡಿದ್ದಿರಬಹುದು. ಸಾಯುತ್ತಿರುವ ತನ್ನ ಸ್ನೇಹಿತನಿಂದ ಹಾಗೂ ದುಃಖಿಸುತ್ತಿರುವ ಸಹೋದರಿಯರಿಂದ

ದೂರದಲ್ಲಿ, ಪೆರೆಯದಲ್ಲಿ ಇದ್ದದ್ದು ಅಲಕ್ಷ್ಯದಿಂದಾಗಿರಲಿಲ್ಲ, ಆತನು ಅವನನ್ನು ಗುಣಪಡಿಸಲು, ಆತನು ಅನೇಕರನ್ನು ಗುಣಪಡಿಸಿದಂತೆ ಬಂದಿದ್ದರೆ *ಅವರು* ಹಾಗೆಯೇ ನಾವು ಎಷ್ಟೊಂದನ್ನು ಕಳೆದುಕೊಳ್ಳುತ್ತಿದ್ದೆವಲ್ಲವೆ, ಕೊನೆಗೆ ಆತನು ಬಂದನು, ಅವರೊಂದಿಗೆ ಅಳುವುದಕ್ಕಾಗಿ, ಮುರಿದ ಹೃದಯಗಳಿಂದ ಅವರ ವಿಶ್ವಾಸದ ಅರಿಕೆಯನ್ನು ಕೇಳಲು, ದುಃಖಿಸುವ ಹೃದಯಗಳಿಗೆ, "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ"[5] ಎಂಬ ಮಾತುಗಳನ್ನು ಹೇಳಲು ಬಂದನು. ತನ್ನ ಮಾತುಗಳನ್ನು ತನ್ನ ಕೃತಿಯಲ್ಲಿ ಪ್ರದರ್ಶಿಸಲು ಬಂದನು. ಯೇಸುವನ್ನು ಪೆರೆಯದಿಂದ ಹಾಗೂ ಲಾಜರನನ್ನು ಸತ್ತವರೊಳಗಿಂದ ಪುನಃ ಕರೆದದ್ದರ ಅಧ್ಯಾಯವನ್ನು ಜಗತ್ತು ಮರೆಯಲು ಸಾಧ್ಯವಿಲ್ಲ.

ಅಷ್ಟು ಅದ್ಭುತಕರವಾದ, ಯೆರೂಸಲೇಮಿಗೆ ಅಷ್ಟು ಸಮೀಪದಲ್ಲಾದ ಒಂದು ಅದ್ಭುತ ಕಾರ್ಯವು ಕೋಲಾಹಲವೆಬ್ಬಿಸದೇ ಇರಲಾರದು. ಅನೇಕರು ಆತನಲ್ಲಿ ನಂಬಿಕೆಯನ್ನಿಟ್ಟರು; ಆದರೆ ಕಪಟಿಗಳಾದ ಫರಿಸಾಯರನ್ನು ಇಲ್ಲವೇ ಕುಯುಕ್ತಿಯ ಸದ್ದುಕಾಯನನ್ನು ನಂಬುವಂತೆ ಮಾಡಲು ಪರಲೋಕದ ಇಲ್ಲವೇ ಭೂಲೋಕದ ಯಾವ ಬಲವೂ ಒತ್ತಾಯ ಮಾಡಲಾರದು. ಈ ಗಂಡಾಂತರಕಾರಿಯಾದ ಅದ್ಭುತ ಕಾರ್ಯದಲ್ಲಿ ಅನೇಕ ಪ್ರಶ್ನೆಗಳಿಗೆ ಅವರು ಸಮಾನ್ಯವಾದ ಕಾರಣವನ್ನು ಕಂಡುಕೊಂಡರು. ಮಹಾಯಾಜಕ ಕಾಯಫನ ಉಪದೇಶದ ಮೇಲೆ ಕಾರ್ಯಮಾಡಿ ಆತನು ಸಾಯಬೇಕೆಂದು ಕೌನ್ಸಿಲು ತೀರ್ಮಾನಿಸಿತು, ಜೀವಿಸುತ್ತಿದ್ದ ಲಾಜರನು ಉತ್ತರ ಕೊಡಲಾಗದವನಾಗಿದ್ದನು ಮತ್ತು ಅವನನ್ನು ಅದೇ ದಂಡನೆಗೆ ಗುರಿಪಡಿಸಬೇಕೆಂದು ಅವರು ಯೋಚಿಸಿದರು. ಆದುದರಿಂದ ಯೇಸು ಎಫ್ರಾಯಿಮಿಗೆ ಹೋದನು. ಮತ್ತೊಮ್ಮೆ ಪೆರೆಯಕ್ಕೆ ಸಮಾರ್ಯ ಮತ್ತು ದಕ್ಷಿಣದ ಗಲಿಲಾಯದ ಮುಖಾಂತರ ಪ್ರಯಾಣ ಮಾಡಿ ಹೋದನು.

**5. ಪೆರೆಯದ ಸೇವೆ** (ಲೂಕ 13:22-17:10; ಮತ್ತಾಯ 19-20:28).-ಪೆರೆಯದಲ್ಲಿ ಯೇಸುವು ಹೊಸ ಕ್ಷೇತ್ರದಲ್ಲಿ ಪ್ರವೇಶಿಸಿದನು, ಅದು ಯೋಹಾನನ ಮೊದಲಿನ ಸೇವೆಯ ದೃಶ್ಯವಾಗಿತ್ತು (ಯೋಹಾನ 10:40; ಹೋಲಿಸು 1:28); ಮತ್ತು ಯೋಹಾನನು ಬಿತ್ತಿದಲ್ಲಿ ಯೇಸುವು ಸುಗ್ಗಿಮಾಡಿದನು ಎಂಬುದರಲ್ಲಿ ಸಂಶಯವಿಲ್ಲ. ಯಾಕಂದರೆ ಇಲ್ಲಿ ಆತನ ಕೆಲಸವು ಗಲಿಲಾಯದಲ್ಲಿಯ ಮೊದಲಿನ ಯಶಸ್ಸಿನಂತೆ ಫಲಬಿಟ್ಟಿತು (ಯೋಹಾನ 10:41, 42). ಒಂದೇ ಒಂದು ಅದ್ಭುತ ಕಾರ್ಯವನ್ನು ಪೆರೆಯಕ್ಕೆ ಸಂಬಂಧಿಸುವುದು ಸಂಶಯದ್ದಾಗಿದೆ; ಆದರೆ ವಿಶಿಷ್ಟವಾದ ಮೃದುವಾದ ಆಸಕ್ತಿಯಿಂದ ಗುರುತಿಸಲ್ಪಟ್ಟ ಬೋಧನೆಯು ಅಲ್ಲಿಂದ ಬಂದಿದೆ. ಲೂಕನಿಂದ ಮಾತ್ರವೇ ದಾಖಲಿಸಲ್ಪಟ್ಟ ಸಾಮ್ಯಗಳ ಎರಡನೆಯ ದೊಡ್ಡ ಗುಂಪು ಇಲ್ಲಿ ಹೇಳಲ್ಪಟ್ಟಿತು ದೊಡ್ಡ ಔತಣ, ತಪ್ಪಿ ಹೋದ ಕುರಿ,[6] ಕಳೆದು ಹೋದ ನಾಣ್ಯ, ಹೋಡಿಹೋದ ಮಗ, ಅನ್ಯಾಯಗಾರನಾದ ಮನೆವಾರ್ತೆಯವನು, ಐಶ್ವರ್ಯವಂತ ಮತ್ತು ಲಾಜರ, ಹಟಹಿಡಿದ ವಿಧವೆ ಮತ್ತು ಫರಿಸಾಯ ಹಾಗು ಸುಂಕದವನು. ಮತ್ತಾಯನು ದ್ರಾಕ್ಷೇ ತೋಟದಲ್ಲಿಯ ಕೂಲಿಯಾಳುಗಳ ಸಾಮ್ಯವನ್ನು ಕೂಡಿಸುತ್ತಾನೆ. ಎಲ್ಲಾ ಸಸಾರಾಂಶ ಸುವಾರ್ತೆಗಳು ಕ್ರಿಸ್ತನು ಚಿಕ್ಕಮಕ್ಕಳನ್ನು ಆಶೀರ್ವದಿಸಿದ ಹಾಗೂ ಐಶ್ವರ್ಯವಂತ ಯುವಕನ ಘಟನೆಗಳನ್ನು ಕೊಡುತ್ತವೆ. ಅಂತ್ಯಕ್ಕೆ ಹತ್ತಿರದಲ್ಲಿ, ಅರು ಯೊರ್ದನ್ ಮತ್ತು ಯೆರೂಸಲೇಮಿಗೆ ಸಮೀಪಿಸುತ್ತಿದ್ದಾಗ, ಯಾಕೋಬ ಹಾಗೂ ಯೋಹಾನರು ಯೇಸುವಿನ ಬಲಗಡೆಯಲ್ಲಿ ಮತ್ತು ಎಡಗಡೆಯಲ್ಲಿ ಸ್ಥಾನಗಳಿಗಾಗಿ ತಮ್ಮ ಬೇಡಿಕೆಯೊಂದಿಗೆ ಆತನ ಬಳಿಗೆ ಬರುತ್ತಾರೆ. ಅವರು ಕಿರೀಟಗಳ ಕನಸು ಕಾಣುತ್ತಿದ್ದರು; ಆತನು ಶಿಲುಬೆಯನ್ನು ಮುನ್ನೋಡುತ್ತಿದ್ದನು. ಪೆರೆಯವನ್ನು ಹಿಂದೆ ಬಿಟ್ಟು, ಯೇಸುವು ಯೆರಿಕೋವಿನ ಸಮೀಪದಲ್ಲಿ

ಯೊರ್ದನನ್ನು ದಾಟಿದನು. ಹಳೇ ಪಟ್ಟಣವನ್ನು ದಾಟಿಹೋಗುತ್ತಿದ್ದಾಗ ಕುರುಡನಾಗಿದ್ದ ಬರ್ತಿಮಾಯನು ತನ್ನ ದೃಷ್ಟಿಯನ್ನು ಪಡೆದುಕೊಂಡು ಮತ್ತು ಸುಂಕದ ಜಕ್ಕಾಯನು ಆಳವಾದ ಗುಣಪಡಿಸುವಿಕೆ ಹೊಂದಿದನು ಇದು ಕ್ರಿಸ್ತನು ತಂದ ಅತಿ ಶ್ರೇಷ್ಠ ನಿಯೋಗ ವಾಗಿತ್ತು. ಕಡಿದಾದ ಬೆಟ್ಟವನ್ನೇರಿ ಯೇಸುವು ಪಸ್ಕದ ಮೊದಲು ಆರು ದಿನಗಳ ಮುಂಚೆ ಬೇಥಾನ್ಯವೆಂಬ ಚಿಕ್ಕ ಗ್ರಾಮವನ್ನು ತಲುಪಿದನು. ದೀರ್ಘ ಪ್ರಯಾಣಗಳು ಮುಗಿದವು ಅಂತ್ಯವು ಹತ್ತಿರದಲ್ಲಿತ್ತು.

---

ಟಿಪ್ಪಣಿಗಳು

[1]ಈ ಘಟನೆ ಅತೀ ಹಳೆಯ ಕೈಬರಹದ ಪ್ರತಿಗಳಲ್ಲಿ ಇರುವುದಿಲ್ಲ. ಆದರೆ ಇದು ಬಹುಶಃ ಐತಿಹಾಸಿಕವಾದದ್ದಾಗಿದೆ, ಯೋಹಾನನ ಸುವಾರ್ತೆಯ ಭಾಗವಾಗಿರದೇ ಇರಬಹುದು. [2]ಮತ್ತಾಯ 3:2; 4:17; ನೋಡಿರಿ ಮಾರ್ಕ 1:14ಬಿ, 15. [3]ಲೂಕ 10:40. [4]ಯೋಹಾನ 11:5. [5]ಯೋಹಾನ 11:25. [6]ಮತ್ತಾಯ 18:12-14ರಲ್ಲಿಯೂ ಸಹ ಹೇಳಲ್ಪಟ್ಟಿದೆ.

© 2009 Truth for Today